ಓ ಎಸ್ ನಂಃ349/2020

ಡಿ. ಡಬ್ಲ್ಯೂ ಃ 1

ದಿಃ 28.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ಪಿ ಎಸ್ ವಕೀಲರಿಂದ

ವಾದಿಯ ಪರಿಚಯ ಇರುತ್ತದೆ. ಅವರು ಆವ್ವೇರಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿ. ಈಗ ಅವರು ಜೀವನೋಪಾಯಕ್ಕಾಗಿ ಕಡಬಗೆರೆಯಲ್ಲಿರುತ್ತಾರೆ ಎಂದರೆ ಸರಿ. ವಾದಿ ನಮ್ಮ ಊರಿನಲ್ಲಿ ನಮ್ಮ ಮದುವೆಯ ಮುಂಚೆ ಇದ್ದರು ಎಂದು ಜನಗಳು ಹೇಳುತ್ತಾರೆ. ನಾನು ಮದುವೆಯಾಗಿ 26 ವರ್ಷಗಳಾಗಿರುತ್ತದೆ. ನಾನು ನನ್ನ ಯಜಮಾನರಿಗೆ 2 ನೆ ಹೆಂಡತಿ ಎಂದರೆ ಸರಿ. ನನ್ನ ಮದುವೆಯ 5 ರಿಂದ 6 ವರ್ಷಗಳ ಮುಂಚೆ ನನ್ನ ಯಜಮಾನರು ಜಯಮ್ಮ ಎಂಬುವವರನ್ನು ಮದುವೆಯಾಗಿದ್ದರು. ನನ್ನ ಯಜಮಾನರು ಮತ್ತು ಜಯಮ್ಮ ನವರು ನನಗೆ ಈ ದಾವೆಯ ವಾದಿಯ ಬಗ್ಗೆ ಹೇಳಿರುವುದಿಲ್ಲ.

ದಾವೆಯ ಲಿಖಿತ ಹೇಳಿಕೆಯನ್ನು ನಾನೇ ವಕೀಲರಿಗೆ ಹೇಳಿ ಬರೆಯಿಸಿರುತ್ತೇನೆ. ವಾದಿ ದಾವಾ ಸ್ವತ್ತಿನಲ್ಲಿ ಅವರು ಸ್ವಾಧೀನದಲ್ಲಿದ್ದು, ಅವರಿಗೆ ಆ ಸ್ವತ್ತು ಸೇರಬೇಕೆಂದು ಈ ದಾವೆಯನ್ನು ಹಾಕಿರುತ್ತಾರೆ. ಸ.ನಂ. 52 ರಲ್ಲಿ ಒಟ್ಟು 50 ಎಕರೆಯ ಮೇಲೆ ಜಮೀನಿರುತ್ತದೆ. ಸದರಿ ಜಮೀನು ಗೋಮಾಳದ ಜಮೀನಾಗಿದ್ದು, ಯಾರ್ಯಾರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ವಾದಿ ಅವರಿಗೆ ಅವರ ತಾತನಿಂದ ಜಮೀನು ಬಂದಿರುತ್ತದೆ ಎಂದು ಹೇಳಿದ್ದು, ಅದು ಸುಳ್ಳಾಗಿರುತ್ತದೆ. ವಾದಿಗಳು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸ.ನಂ. 52 ರಲ್ಲಿ ವಾದಿ ಎಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸ.ನಂ. 52 ರಲ್ಲಿ ವಾದಿ ಉಳುಮೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ.

ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಲಿಖಿತ ಹೇಳಿಕೆಯಲ್ಲಿ ಹೇಳಿರುವ ಜಮೀನಿನ ಚೆಕ್ ಬಂದಿ ಪೂರ್ವಕ್ಕೆ ಅರಸಪ್ಪ ನವರ ಮಗ ರುದ್ರಯ್ಯ, ಪಶ್ಚಿಮಕ್ಕೆ ಒಸಳಪ್ಪ ನವರ ಮಗ ರುದ್ರಯ್ಯ, ಉತ್ತರಕ್ಕೆ ಗೋಮಾಳ ಖಾಲಿ ಜಾಗ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ. ನಾನು

ದಾಖಲಾತಿಗಳಲ್ಲಿ ನಿ ಡಿ 13 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿ ಡಿ 13 ರ ಚೆಕ್ ಬಂದಿಯಲ್ಲಿ ನಮ್ಮ ಜಮೀನಿನ ಉತ್ತರಕ್ಕೆ ಮುತ್ತುರಾಜು ರವರ ಜಮೀನು ಎಂದು ಇರುತ್ತದೆ ಎಂದರೆ

ಸರಿಯಲ್ಲ.ಸಾಕ್ಷಿಯು ಮುಂದುವರೆದು ಸದರಿ ಉತ್ತರ ದಿಕ್ಕಿನಲ್ಲಿಇರುವ ಮುತ್ತುರಾಜು ನನ್ನ ಯಜಮಾನರಾಗಿರುತ್ತಾರೆ. ನಾನು ಓ ಎಸ್ 19/2018 ರಲ್ಲಿ ಅಂದರೆ ನಿಡಿ 15 ರಲ್ಲಿ ಉತ್ತರ ದಿಕ್ಕಿನಲ್ಲಿ ಮುತ್ತುರಾಜು ಎಂದು ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಜಾಗವು ಒಟ್ಟಿಗೆ ಇರುತ್ತದೆ ಎಂದು ನುಡಿಯುತ್ತಾರೆ ಮತ್ತು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಉತ್ತರ ದಿಕ್ಕಿನಲ್ಲಿ ಮುತ್ತುರಾಜು ಎಂದು ಸದರಿ ಡಿಕ್ರಿಯಲ್ಲಿ ನಿ ಡಿ 17 ರಂತೆ ತೋರಿಸಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿ ಡಿ 15 ಮತ್ತು 17 ರಲ್ಲಿ ಉತ್ತರಕ್ಕೆ ಸ್ವಾಧೀನದಲ್ಲಿ ತೋರಿಸಲಾಗಿರುವ ಮುತ್ತುರಾಜು ವಾದಿ ಎಂದರೆ ಸರಿ.

ಸ.ನಂ. 52 ರಲ್ಲಿ 297 ಎಕರೆ 20 ಗುಂಟೆ ಜಮೀನಿರುತ್ತದೆ ಎಂದರೆ ಗೊತ್ತಿಲ್ಲ. ವಾದಿಯ ತಾತನ ಹೆಸರಿಗೆ 1960-61 ರಲ್ಲಿ 4 ಎಕರೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ ಎಂದರೆ ಸುಳ್ಳು. ನಾನು ನಿಪಿ 2 ರ ಪ್ರಕಾರ ವಾದಿಯ ತಾತನಿಗೆ ದಾವಾಸ್ವತ್ತು ಮಂಜೂರಾಗಿರುತ್ತದೆ ಎ ಂದರೆ ಸುಳ್ಳು. ನಿಪಿ 2 ನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ, ಅದಕ್ಕೆ ಕಾರಣ ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ನಿ ಪಿ 2 ನ್ನು ಯಾವ ಆಧಾರದ ಮೇಲೆ ಸುಳ್ಳು ಎಂದು ಹೇಳುತ್ತೇನೆಂದರೆ ಸಾಕ್ಷಿ ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ದಾಖಲಾತಿ ಸುಳ್ಳು ಎಂದು ಹೇಳಲು ಸಂಬಂಧಪಟ್ಟ ಇಲಾಖೆಗಳಿಂದ ಯಾವುದೆ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ವಾದಿಯ ತಾತನಿಗೆ ದಾವಾ ಸ್ವತ್ತು ಮಂಜೂರಾದ ದಿನದಿಂದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸುಳ್ಳು. ನಿ ಪಿ 13 ರಂತೆ ವಾದಿಯ ಕುಟುಂಬದಲ್ಲಿ ವಿಭಾಗವಾಗಿ ಅದರ ಖಾತೆ ಕೂಡ ಬದಲಾವಣೆ ಆಗಿರುತ್ತದೆ ಎಂದರೆ ಸುಳ್ಳು. ನಿ ಪಿ 13 ಯಾವ ಆಧಾರದ ಮೇಲೆ ಸುಳ್ಳಾಗಿರುತ್ತದೆ ಎಂದರೆ ನನಗೆ ಓದಲು ಬರುವುದಿಲ್ಲ.

ನನ್ನ ಯಜಮಾನರಿಗೆ ದಾವಾ ಸ್ವತ್ತು ಮಂಜೂರಾಗುವ 5 ವರ್ಷಗಳ ಮುಂಚಿನಿಂದ ನನ್ನ ಯಜಮಾನರು ಸ್ವಾಧೀನದಲ್ಲಿದ್ದರು. ನನ್ನ ಯಜಮಾನರು ಸ.ನಂ. 52 ರಲ್ಲಿ 2 ವರೆ ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು. ನನ್ನ ಯಜಮಾನರ ಮೊದಲನೆ ಹೆಂಡತಿ ಜಯಮ್ಮ ನವರು ಕೂಡ ನನ್ನ ಯಜಮಾನರ ಜೊತೆ ಆ ಸಮಯದಲ್ಲಿದ್ದರು. ಸದರಿ

ಜಮೀನನ್ನು ಮಂಜೂರು ಮಾಡಲು ಗಂಡ ಹೆಂಡತಿ ಇಬ್ಬರು ಅರ್ಜಿಯನ್ನು ಹಾಕಿದ್ದರು. ಇಬ್ಬರು ಬೇರೆ ಬೇರೆ ಅರ್ಜಿಗಳನ್ನು ಹಾಕಿ ಜಮೀನಿನ ಮಂಜೂರಾತಿ ಪಡೆದಿರುತ್ತಾರೆ.

ಜಮೀನು ಮಂಜೂರಾದ ನಂತರ ನನ್ನ ಯಜಮಾನರ ಹೆಸರಿಗೆ ಆಗಿರುವ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಈ ರೀತಿಯ ಯಾವುದೆ ದಾಖಲಾತಿಯನ್ನು

ಹಾಜರುಪಡಿಸಿರುವುದಿಲ್ಲವೆಂದರೆ ಸರಿಯಲ್ಲ. ನಾನು ನೀಡಿರುವ ಚೆಕ್ ಬಂದಿಯಲ್ಲಿ ಸ್ವಾಧೀನದಲ್ಲಿರುವುದಕ್ಕೆ ಪೋಟೋ ಹಾಗೂ ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಓ ಎಸ್ 19/2018 ರ ದಾವೆ ಹೂಡಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಇರುವ ಚೆಕ್ ಬಂದಿಯನ್ನು ಸಹ ನಾನೇ ವಕೀಲರಿಗೆ ಹೇಳಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗಾಗಿ ಎಲ್ ಪಿ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**